ಬಿಡು, ಒಂದು ಸಿ.ಟಿ ಸ್ಕ್ಯಾನ್ ಮಾಡಿಬಿಡೋಣ. ಎಲ್ಲೋ ಒಂದು ಚಿಕ್ಕ ಕಿಡ್ನಿ ಕಲ್ಲು ಜಾರಿರಬೇಕು. ಸ್ಕ್ಯಾನ್ ಆದರೆ ಇವತ್ತು ರಾತ್ರಿ ಪಾರ್ಟಿಗೂ ಮನಸ್ಸು ಆರಾಮಾಗಿರುತ್ತೆ. ರಾತ್ರಿ ಚೆನ್ನಾಗಿ ಕುಡಿದರೆ ಇರುವ ಚಿಕ್ಕ ಪುಟ್ಟ ಕಲ್ಲೂ ಹೋಗಿಬಿಡುತ್ತದೆ" ಎಂದು ತಮಾಷೆ ಮಾಡಿದ. "ಸರಿ, ಈಗಲೇ ಬರುತ್ತೇನೆ" ಎಂದು ಹೇಳಿ, ಪದ್ಮಜಾಳಿಗೆ, "ಪ್ರೈವೇಟ್ ಆಸ್ಪತ್ರೆಯಲ್ಲಿ ಅರ್ಜೆಂಟ್ ಕಾಲ್ ಇದೆ, ಬೇಗ ಬಂದೆ. ಬಂದ ಮೇಲೆ ಸ್ನಾನ ಮಾಡಿ ದೇವರಿಗೆ ಪೂಜೆ ಮಾಡುತ್ತೇನೆ" ಎಂದು ಸುಳ್ಳು ಹೇಳಿ ಹೊರಟ.

ಪ್ರಾಣೇಶ ಮೂರು ವರ್ಷಕ್ಕಿಂತ ಹೆಚ್ಚು ಕಾಲ ಯಾವ ಕಾರನ್ನೂ ಇಟ್ಟುಕೊಳ್ಳುತ್ತಿರಲಿಲ್ಲ. ಮೂರು ವರ್ಷದ ಹಳೆಯ ಮರ್ಸಿಡಿಸ್–ಎಸ್ ಕ್ಲಾಸ್ ಕಾರನ್ನು ಮಾರಿ, ತಿಂಗಳ ಹಿಂದೆ ಕೊಂಡಿದ್ದ ಟೆಸ್ಲಾ–ಮಾಡೆಲ್–ಎಕ್ಸ್ ಕಾರನ್ನು ಆಸ್ಪತ್ರೆಗೆ ಓಡಿಸಿದ. ಯಥಾಪ್ರಕಾರ ಬಿ.ಬಿ.ಸಿ. ರೇಡಿಯೊ 4ನ ಮಾತುಗಳು ಶುರುವಾದವು (ಕಾರು ಯಾವುದಾದರೇನು ರೇಡಿಯೊ ಚಾನೆಲ್ ಇದೊಂದೇ). ತಲೆ ನೋಯುತ್ತಿತ್ತು, ಅದಕ್ಕಿಂತ ಹೆಚ್ಚಾಗಿ ರಕ್ತದ ಉಚ್ಚೆ ಕಿರಿಕಿರಿ ಮಾಡಿತು. ಅದಕ್ಕಿಂತಲೂ ಮಿಗಿಲಾಗಿ ಹಿಂದಿನ ರಾತ್ರಿ ತನ್ನ ಮತ್ತು ತನ್ನ ಮಗನ ನಡುವೆ ನಡೆದ ಸಂವಾದವೇ ಮತ್ತೆಮತ್ತೆ ನೆನಪಿಗೆ ಬಂದು ಇನ್ನೂ ಕಸಿವಿಸಿಯಾಯಿತು.

ಮಗ ಎಕಾನಾಮಿಕ್ಸ್ ಮಾಡುತ್ತೇನೆ, ಮುಂದೆ ಬ್ಯಾಂಕರ್ ಆಗುತ್ತೇನೆ ಎಂದು ಚೆನ್ನಾಗಿಯೇ ಓದುತ್ತಿದ್ದ. ಪ್ರತಿಷ್ಠಿತ 'ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್'ನಲ್ಲಿ ಸೀಟು ಕೂಡ ಸಿಕ್ಕಿತ್ತು. ಆದರೆ, ಚಿಕ್ಕ ವಯಸ್ಸಿನಿಂದ ಇಲ್ಲಿಯ ಎಲ್ಲ ಮಕ್ಕಳಂತೆ ಪಿಯಾನೊ ಮತ್ತು ವಯೋಲಿನ್ ಕಲಿಯಲು ಹಾಕಿದ್ದೇ ತಪ್ಪಾಯಿತೇನೋ? ಶಾಲೆಯಲ್ಲಿ ಸಂಗೀತವನ್ನು ಒಂದು ವಿಷಯವಾಗಿ ತೆಗೆದುಕೊಂಡಿದ್ದ. ಆದರೆ, ಯುನಿವರ್ಸಿಟಿಯಲ್ಲಿ ಎಕನಾಮಿಕ್ಸ್ ಬಿಟ್ಟು ಸಂಗೀತವನ್ನು ತೆಗೆದುಕೊಳ್ಳುತ್ತಾನೆಂದು ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಸಂಗೀತ ಏನು ಹೊಟ್ಟೆ ತುಂಬಿಸುತ್ತದೆಯೇ ಎಂದು ಇಬ್ಬರೂ ಎಷ್ಟು ಸಲ ಹೇಗೆಲ್ಲ ಹೇಳಿದರೂ ಅದು ಅವನ ತಲೆಗೆ ಹೋಗಲಿಲ್ಲ. ಅಪ್ಪ ಮತ್ತು ಅಪ್ಪನ ವಾತಾವರಣದಿಂದ ದೂರವಿರುತ್ತೇನೆ ಎಂದು ದೂರದ ಸ್ಕಾಟ್‌ಲ್ಯಾಂಡಿನ ಎಡಿನ್‌ಬರಾ ಸೇರಿಕೊಂಡಿದ್ದ.

ತಮ್ಮ ವೆಡ್ಡಿಂಗ್ ಆ್ಯನಿವರ್ಸರಿ ಎಂದು ಹಿಂದಿನ ದಿನ ಸಾಯಂಕಾಲ, ಯುನಿವರ್ಸಿಟಿ ಸೇರಿ ಮೂರು ತಿಂಗಳಾದ ಮೇಲೆ, ಇದೇ ಮೊದಲ ಸಲ ಎಡಿನ್‌ಬರಾದಿಂದ ಬಂದಿದ್ದ. ಹೆಂಡತಿ ಮಲಗಿದ ಮೇಲೆ, ಮಗ ತಂದ 12 ವರ್ಷ ಹಳೆಯ ಗ್ಲೆನ್‌ಲಿವೆಟ್ ಸಿಂಗಲ್ ಮಾಲ್ಟ್ ಸ್ಕಾಚ್ ವಿಸ್ಕಿಯನ್ನು ಇಬ್ಬರೂ ಹಾಲ್‌ನಲ್ಲಿ ಕುಡಿಯುತ್ತ ಕೂತಾಗ, ಮಗ ಹೇಳಿದ, "ಡ್ಯಾಡಿ, ನನ್ನ ಜೊತೆ ನನ್ನ ಫ್ರೆಂಡನ್ನು ಕರೆತಂದಿದ್ದೇನೆ, ಹೋಟೆಲಿನಲ್ಲಿ ಇಳಿದುಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದೇನೆ. ಒಂದೇ ಡ್ರಿಂಕ್ ಕುಡಿದು ಅಲ್ಲಿಯೇ ಮಲಗಲು ಹೋಗುತ್ತೇನೆ. ಅಲ್ಲಿ ಹೋಗಲು ಉಬರ್ ಟ್ಯಾಕ್ಸಿ ಬುಕ್ ಮಾಡಿದ್ದೇನೆ".

"ಯಾಕೆ? ಈ ಮನೆಯೇನು ಚಿಕ್ಕದೇ, ಆರು ಬೆಡ್‌ರೂಮಿವೆ. ನಿನ್ನ ಫ್ರೆಂಡನ್ನ ಇಲ್ಲೇ ಕರೆತರಬಹುದಿತ್ತಲ್ಲ, ಏನು ಗರ್ಲ್‌ಫ್ರೆಂಡಾ?" ಎಂದ ಪ್ರಾಣೇಶ.

"ಇಲ್ಲ ಡ್ಯಾಡಿ, ಬಾಯ್‌ಫ್ರೆಂಡ್" ಎಂದ.

ಆಗಲೇ ವಿಸ್ಕಿ ತಲೆಗೆ ಹಿಡಿಯುತ್ತಿತ್ತು, "ತಮಾಷೆ ಮಾಡ್ತೀಯಾ?" ಎಂದು ನಕ್ಕ.

"ಇಲ್ಲ ಡ್ಯಾಡಿ, ಐ ಯಾಮ್ ಸೀರಿಯಸ್."

"ಮತ್ತೆ, ನೀನು ಈ ಊರು ಬಿಟ್ಟು ಅಲ್ಲಿಗೆ ಹೋಗುವಾಗ ನಿನಗೆ ಒಬ್ಬಳು ಗರ್ಲ್‌ಫ್ರೆಂಡ್ ಇದ್ದಾಳೆಂದು ನಿನ್ನಮ್ಮ ಹೇಳುತ್ತಿದ್ದಳು? ಯಾವಾಗ ನೀನು ಗೇ (ಸಲಿಂಗಕಾಮಿ) ಆದೆ?"

"ನೋ ಡ್ಯಾಡಿ. ನಾನು ಬೈ (ದ್ವಿಲಿಂಗಕಾಮಿ)" ಎಂದ.

ಪ್ರಾಣೇಶ ತನ್ನ ವೃತ್ತಿಜೀವನದಲ್ಲಿ ಸಲಿಂಗಕಾಮಿಗಳನ್ನು, ಎಲ್.ಜಿ.ಬಿ.ಟಿಯವರನ್ನು ಕ್ಲಿನಿಕ್ಕಿನಲ್ಲಿ ಕನ್‌ಸಲ್ಟ್ ಮಾಡಿದ್ದಾನೆ, ಲಿಂಗಬದಲು ಮಾಡಿಸಿಕೊಳ್ಳುವವರಿಗೆ ಹೊಸ ಸ್ತನಗಳ ಶಸ್ತ್ರಚಿಕಿತ್ಸೆಯನ್ನೂ